Sri S. BANGARAPPA : What I feel is that the Government is Committed to safeguard the interest of the minorities. We have got our own Department to take suitable action in respect of maintaining this approach of the Government. In case, we feel that there is necessity to form a Grievance Committee, certainly Government will never hesitate to form such Grievance Committee. Certainly with all seriousness, this suggestion of the Hon'ble Member will be kept in mind.

Sri R.V. DESHAPANDE : The Hon'ble Chief Minister stated that the term of the Committee expired in 1989. I would like to ask the Hon'ble Chief Minister, as to why did the Government not reconstitute the Committee, as soon as the term of the Committee was expired. Was it because, the constitution of the Committee was not helpful in the interest of the minorities or was it a lapse on the part of the Government to constitute the Committee?

Sri S. BANGARAPPA : There is no question of considering the subject actually on the lines that you have suggested. The term of the Committee itself expired. The purpose for which the committee was constituted at that time, in fact, was achieved. This is what, the Government has thought at that point of time. Your own Government was there. Even if we feel that there is any necessity, we do not mind forming a Grievance Cell. Certainly Government is committed and we will take all possible steps. There is no negative approach from our side.

ಅಧ್ಯಕ್ಷರು : ಮಾನ್ಯ ಸಿದ್ಧನಗೌಡರೇ, ನಿಮ್ಮ ಪ್ರಶ್ನೆ 23 (185) ಮಾನ್ಯ ಗೃಹ ಸಚಿವರಿಗೆ ಸಂಬಂಧಪಟ್ಟಿರತಕ್ಕಂಥದ್ದು. ಅವರ ಅಣ್ಣಂದಿರು ತೀರಿಹೋಗಿದ್ದಾರೆ. ಆದ್ದರಿಂದ ನಾನು ಇದನ್ನು ತಡೆಹಿಡಿದಿದ್ದೇನೆ.

ಸರ್ಕಾರಿ ಇಲಾಖೆಗಳಲ್ಲಿ ನೇಮಕಾತಿಗೆ ವಯೋಮಿತಿ.

308 - ಶ್ರೀ ಗುರುಪಾದಪ್ಪ ನಾಗ್ಮಾರ್‌ಪಳ್ಳಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಇಲಾಖೆಗಳಲ್ಲಿ ಸಿ ಮತ್ತು ಡಿ ವರ್ಗದ ಹುದ್ದೆಗಳಿಗೆ ನೇಮಕಾತಿ ವಯೋಮಿತಿಯನ್ನು ಮೂರು (3) ವರ್ಷಗಳಷ್ಟು ಹೆಚ್ಚಿಸುವುದಾಗಿ ಹಿಂದಿನ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಕಟಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಮೇಲ್ಕಂಡ ಘೋಷಣೆಯನ್ನು ಮಾಡಿ ಒಂದು ವರ್ಷ ಕಳೆದಿದ್ದರೂ ಇದುವರೆವಿಗೂ ಸರ್ಕಾರ ಆದೇಶವನ್ನು ಹೊರಡಿಸದಿರಲು ಕಾರಣಗಳೇನು?

ಈ) ಸರ್ಕಾರ ಕೂಡಲೇ ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಈ ಬಗ್ಗೆ ರಾಜ್ಯಪಾಲರು ದಿನಾಂಕ 1-3-91ರಂದು ಜಂಟಿ ಅಧಿವೇಶನದ ಭಾಷಣದಲ್ಲಿ ಘೋಷಣೆಯನ್ನು ಮಾಡಿರುತ್ತಾರೆ.

ಆ) ದಿನಾಂಕ 30-10-1991ರಂದು ಹಾಲಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ

ಈ) (ಅ)ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರಿ ಇಲಾಖೆಗಳಲ್ಲಿ ಸಿ ಮತ್ತು ಡಿ ವರ್ಗದ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಮೂರು ವರ್ಷದ ವಯೋಮಿತಿಯನ್ನು ಹೆಚ್ಚಿಸುತ್ತೇವೆ ಎಂದು ದಿನಾಂಕ 1-3-91ರಂದು ಜಂಟಿ ಅಧಿವೇಶನದಲ್ಲಿ, ರಾಜ್ಯಪಾಲರ ಭಾಷಣದಲ್ಲಿ ಅದನ್ನು ಹೇಳಿದರು. ಏಳು ತಿಂಗಳಾದ ಮೇಲೆ ಈಗ ಉತ್ತರದಲ್ಲಿ ಏನು ಕೊಟ್ಟಿದ್ದಾರೆ ಎಂದು ನಾವು ತಿದ್ದುಪಡಿಯನ್ನು ತರುತ್ತೇವೆ ಎಂದು. ತಿದ್ದುಪಡಿಯನ್ನು ತರುವುದರ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಿದ್ದೀರಾ? ಅದನ್ನು ಏತಕ್ಕೆ ಇದುವರೆಗೂ ಹೊರಡಿಸಿಲ್ಲ? ಏಳು ತಿಂಗಳ ತಡ ಏತಕ್ಕೆ ಆಯಿತು ಎನ್ನುವುದು ಒಂದು ಪ್ರಶ್ನೆ. ಇನ್ನೊಂದು ಈ ಬಗ್ಗೆ ವಯೋಮಿತಿಯನ್ನು ಮೀರಿದ ಹುಡುಗರಿಗೆ ಇವತ್ತಿನವರೆಗೂ ಸುದ್ದಿ ಪ್ರಚಾರದಲ್ಲಿ ತಿಳಿವಳಿಕೆಯನ್ನು ತಿಳಿಸಿಲ್ಲ. ಅದನ್ನು ಏತಕ್ಕೆ ತಿಳಿಸಿಲ್ಲ? ಒಂದು ವೇಳೆ ಮುಂದೆಯಾದರೂ ಅದನ್ನು ತಿಳಿಸುವ ಕಾರ್ಯಕ್ರಮವೇನಾದರೂ ಸರ್ಕಾರದಲ್ಲಿ ಇದೆಯೇ? ಮತ್ತು ಕೆ.ಇ.ಬಿ. ಮತ್ತು ಬೇರೆ ಬೇರೆ ಸಂಸ್ಥೆಗಳಲ್ಲಿ ನೇಮಕಾತಿಗಾಗಿ ಕರೆದಿದ್ದಾರೆ. ಅಂಥವರಿಗೆ ವಯೋಮಿತಿ ಮೀರಿದೆ. ಪುನಃ ಅವರಿಗೆ ಅರ್ಜಿಯನ್ನು ಹಾಕುವುದಕ್ಕೆ ಏನಾದರೂ ಅನುಕೂಲವನ್ನು ಮಾಡಿಕೊಡುತ್ತೀರಾ? ಅದನ್ನು ಮಾಡಿಕೊಡತಕ್ಕಂಥ ಯೋಜನೆ ಏನಾದರೂ ಇದೆಯೇ? ವಯೋಮಿತಿ ಮೀರಿ ಹೋಗಿದೆ. ನೀವು ತಿದ್ದುಪಡಿ ತರುವುದಕ್ಕೆ ಲೇಟಾಗುತ್ತದೆ. ಅಂಥವರಿಗೆ ಏನಾದರೂ ಅವಕಾಶವನ್ನು ಮಾಡಿಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಅವರ ಪ್ರಶ್ನೆಗೆ ಸಂಪೂರ್ಣವಾದ ಉತ್ತರವನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ರಾಜ್ಯಪಾಲರ ಭಾಷಣದಲ್ಲಿ ನಾವು ಏನು ಪ್ರಸ್ತಾವನೆ ಮಾಡಿದ್ದೇವೆ. ಅದರ ಪ್ರಕಾರ ನಾವು ತಾರೀಖಿನ್ನು ಕೂಡ ಕೊಟ್ಟಿದ್ದೇವೆ. ಉತ್ತರಗಳನ್ನು ದಯಮಾಡಿ ಮಾನ್ಯ ಸದಸ್ಯರು ನೋಡಬಹುದು. ದಿನಾಂಕ 30-10-91ರಂದು ಅಲ್ಲಿ ಇನ್ನುಳಿದವುಗಳಿಗೆ ಸೂಕ್ತ ತಿದ್ದುಪಡಿಯನ್ನು ಮಾಡಿದ್ದೇವೆ. ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಅದನ್ನು ಜಾರಿಗೆ ಕೊಟ್ಟುಬಿಟ್ಟಿದ್ದೇವೆ. ಅದನ್ನು ಕೊಟ್ಟಮೇಲೆ ಮೂರು ವರ್ಷದ ಅವಧಿ ಸಿಕ್ಕಿ ಆಗಿ ಹೋಗಿದೆ. ಮೂರು ವರ್ಷಕ್ಕೂ ಕೂಡ ಅದನ್ನು ಉಪಯೋಗ ಮಾಡಿ ಪ್ರಚಾರವಾಗಿಲ್ಲ. ಮತ್ತೊಂದು ಆಗಿಲ್ಲ. ಎಂದರೆ ಅದು ಈಗಾಗಲೇ ಎಲ್ಲಾ ಪತ್ರಿಕೆಯಲ್ಲೂ ಬಂದು ಆಯಿತು. ಎಲ್ಲಾ ಆಯಿತು. ಅದರ ಪ್ರಕಾರ ಎಲ್ಲಾ ಮಕ್ಕಳಿಗೂ ಅದು ಗೊತ್ತಾಗಿದೆ. ಯಾರು ಯಾರು ಅಭ್ಯರ್ಥಿಗಳು ಇದ್ದಾರೆ. ಅವರಿಗೆಲ್ಲಾ ಗೊತ್ತಾಗಿದೆ. ಅದರ ಪ್ರಕಾರವೇ ಕರ್ನಾಟಕ ರಾಜ್ಯದ ತುಂಬಾ ನಡೆಯುತ್ತಿದೆ. ಕೆ.ಇ.ಬಿ.ಯಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಮತ್ತೊಂದು ಆಗಿದ್ದರೆ ಅದು ನನಗೆ ಗೊತ್ತಿಲ್ಲ. ಬೇಕಾದರೆ ಅವರ ತಿಳಿವಳಿಕೆಯಿಂದ ತಿಳಿದುಕೊಳ್ಳೋಣ. ಅಲ್ಲಿಯೂ ಕೂಡ ನಾವು ಅನಿವಾರ್ಯವಾಗಿ ಈ ನಿಯಮವನ್ನು ಇಟ್ಟುಕೊಂಡಿದ್ದೇವೆ. ಅದರ ಬಗ್ಗೆ ತಮಗೇನೂ ಅನುಮಾನ ಬೇಕಾಗಿಲ್ಲ. ಯಾರಾದರೂ

ಅಭ್ಯರ್ಥಿಗಳಿಗೆ ಗೊತ್ತಾಗದಿದ್ದರೆ ತಿಳಿದುಕೊಳ್ಳುವುದು ಒಳ್ಳೆಯದು. ನಮಗೆ ಇರತಕ್ಕಂಥ ವಿಧಿ ವಿಧಾನ ತಮಗೆಲ್ಲಾ ಗೊತ್ತಿರುವ ಹಾಗೆ ನಾವು ಗೆಜೆಟ್ ನೋಟೀಫಿಕೇಶನ್ ಮತ್ತೊಂದನ್ನು ಮಾಡುವುದರ ಮುಖಾಂತರ, ಕಾನೂನು ಪ್ರಕಾರವೇ ಮಾಡುತ್ತೇವೆ. ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ಈ ಕಾಲದಲ್ಲೇ ಅದು ಬಂದಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಮ್ಮ ಆದೇಶವನ್ನು ನೋಡಿಲ್ಲ.

ಶ್ರೀ ಎಸ್. ಬಂಗಾರಪ್ಪ : ಆದೇಶ ಹೋಗಿಬಿಟ್ಟಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮತ್ತೆ ಇಲ್ಲಿ ತಿದ್ದುಪಡಿಯನ್ನು ತರುತ್ತೇವೆ ಎಂದು ಹೇಳಿದ್ದೀರಿ. ಆದೇಶವನ್ನು ತಾವು ಯಾವಾಗ ಹೊರಡಿಸಿದ್ದೀರಿ? ಎಂದು ಅದನ್ನು ಹೊರಡಿಸಿದ್ದೀರಿ ಎಂದು ನಾನು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ತಿದ್ದುಪಡಿ ಮಾಡಿದ ಮೇಲೆ ಅದು ಮುಗಿದು ಹೋಗಿದೆ. ಅದೇ ಆದೇಶ. ತಮಗೆ ಬೇಕಾದರೆ ಆ ಆದೇಶದ ನಂಬರ್‌ನ್ನು ಕೂಡ ಕೊಡುತ್ತೇನೆ. ನೇಮಕಾತಿಯನ್ನು ನಿಯಮಾವಳಿಗಳ ಪ್ರಕಾರ ಮಾಡಬೇಕಾಗುತ್ತದೆ. ಆದೇಶದ ನಂಬರ್ ಅಧಿಸೂಚನೆ ಸಂಖ್ಯೆ ಸಿಎಸ್‌ಯುಇ 21 ಎಸ್‌ಆರ್‌ಆರ್ 91 ದಿನಾಂಕ 30-10-91 ಈ ಆರ್ಡರನ್ನು ಹೊರಡಿಸಿ, ಕಳುಹಿಸಿ ಆಗಿ ಹೋಗಿದೆ. ಆದುದರಿಂದ ಯಾರೋ ಬಂದು ತಮಗೆ ವಿಷಯವನ್ನು ತಿಳಿಸಿರತಕ್ಕಂಥವರು ಸರಿಯಾಗಿ ಅದನ್ನು ನೋಡಿಲ್ಲ. ಅದನ್ನು ನೋಡಿಬಿಟ್ಟರೆ ಸಾಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಉಳಿದವರಿಗೆ ಅರ್ಜಿಯನ್ನು ಮತ್ತೆ ಹಾಕುವುದಕ್ಕೆ ಅನುಕೂಲವನ್ನು ಮಾಡಿಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮುಂದೆ ಅವರಿಗೆ ಹಾಕುವುದಕ್ಕೆ ಬರುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕೆಲವರಿಗೆ ಅರ್ಜಿಯನ್ನು ಕರೆದಿದ್ದಾರೆ. ಅವರಿಗೆ ವಯೋಮಿತಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಇದನ್ನು ಮಾಡುತ್ತಾ ಹೋಗಿಬಿಟ್ಟರೆ ಯಾರೂ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ. ನಾವು ವಯೋಮಿತಿಯನ್ನು ಮುಂದುವರಿಸಿದರೆ ಆ ಟೈಮ್‌ನಲ್ಲಿ ಯಾರು ಬರುತ್ತಾರೆ. ಅದು ಅವರಿಗೆ ಮಾತ್ರ ಅಪ್ಲೈ ಆಗುತ್ತದೆ. ಕಾನೂನು ಇರುವುದು ಹಾಗೆಯೇ. ಎಲ್ಲಾ ಕಾಲದಲ್ಲೂ ಒಂದೇ ಕಾನೂನು. ಅದನ್ನು ಅವರು ಸದುಪಯೋಗಪಡಿಸಿಕೊಳ್ಳಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಪಾಪ, ಈ ಮಧ್ಯದಲ್ಲಿ ಏತಕ್ಕೆ ಅವರು ಸಾಯಬೇಕು?

ಶ್ರೀ ಎಸ್. ಬಂಗಾರಪ್ಪ : ಎಲ್ಲಿ ಕೊಡುತ್ತಾರೆ. ಅದು ಅಲ್ಲಿಯವರಿಗೆ ಮಾತ್ರ ಅದು ಅಪ್ಲೈ ಆಗುತ್ತದೆ ಎನ್ನತಕ್ಕಂಥದ್ದನ್ನು ನಾವು ಆರ್ಡರ್‌ನಲ್ಲಿ ಹೇಳಿಬಿಟ್ಟಿರುತ್ತೇವೆ. ಅದರ ಪ್ರಕಾರ ಹೋಗಬೇಕಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ವಯೋಮಿತಿಯ ಮೇಲೆ ಚರ್ಚೆ ಮಾಡುತ್ತಿದ್ದಾರೆ. ನನ್ನ ಪ್ರಶ್ನೆ ಏನೆಂದರೆ ವಯೋಮಿತಿ ಹಾಕುವುದಕ್ಕೆ ನಮಗೆ ಏನು ಹಕ್ಕಿದೆ? ವಯಸ್ಸು ಅವರಿಗೆ ಆಗುತ್ತಾ ಇರುತ್ತದೆ. ಉದ್ಯೋಗದ ವ್ಯವಸ್ಥೆಯನ್ನು ಮಾಡುವ ಯೋಗ್ಯತೆ ಇಲ್ಲದೆ ಇರುವಂತಹ ಸರ್ಕಾರಗಳಿಗೆ ವಯೋಮಿತಿ ಹಾಕುವಂಥಹ ಹಕ್ಕು ಉಂಟೇ ಎಂದು ನನ್ನ ಪ್ರಶ್ನೆ. ಆದ್ದರಿಂದ ತಾವು ಮತ್ತೆ ಆಲೋಚನೆ

ಮಾಡಿ ನಮ್ಮ ದೇಶದ ಯುವಕ ಯುವತಿಯವರಿಗೆ ಮೊದಲನೆಯ ಉದ್ಯೋಗ ಕೊಡುವಂಥ ಕಾಲಕ್ಕೆ ವಯೋಮಿತಿ ಹಾಕಬಾರದು, ಇದರ ಬಗ್ಗೆ ಆಲೋಚನೆ ಮಾಡಿದ್ದೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಅಂದರೆ ಮೊದಲನೆಯ ಹುದ್ದೆಗೆ 70 ವರ್ಷ ಆಗಿರುತ್ತದೆಂದು ಇಟ್ಟುಕೊಳ್ಳೋಣ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರ ತಪ್ಪಲ್ಲ, ನಮ್ಮ ತಪ್ಪು, ಸರ್ಕಾರದ ತಪ್ಪು.

ಶ್ರೀ ಎಸ್. ಬಂಗಾರಪ್ಪ : ಯಾರ ತಪ್ಪು ಎಂದು ಪ್ರಶ್ನೆ ಬೇರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಾವು ಉದ್ಯೋಗವನ್ನು ಒದಗಿಸಿಲ್ಲ. ಅದು ಅವನ ತಪ್ಪಲ್ಲ, ನಮ್ಮ ಸರ್ಕಾರದ ತಪ್ಪು. ಆ ಕಾರಣ ಉದ್ಯೋಗಸ್ಥ ಏನಿದ್ದಾನೆ. ಅವನು ಮೊದಲನೆಯ ಉದ್ಯೋಗಕ್ಕೆ ಬಂದಿದ್ದರೆ ಅವನಿಗೆ ವಯೋಮಿತಿ ಹಾಕಬಾರದು.

ಶ್ರೀ ಎಸ್. ಬಂಗಾರಪ್ಪ : ಪ್ರೊ. ನಂಜುಂಡಸ್ವಾಮಿಯವರೆ ತಮ್ಮ ಪ್ರಶ್ನೆಯನ್ನು ನಾನು ಅರ್ಥಮಾಡಿಕೊಂಡೇ ಹೇಳುತ್ತಿದ್ದೇನೆ. ಮೊದಲನೆಯ ಉದ್ಯೋಗ ಅವನಿಗೆ ಇಲ್ಲಿಯವರೆಗೆ ಸಿಕ್ಕಿಲ್ಲ ಎಂದು ಇಟ್ಟುಕೊಳ್ಳೋಣ. ಅಂದರೆ 50-55-60-70 ವರ್ಷ ಆದಮೇಲೆ ಅವನಿಗೆ ಉದ್ಯೋಗ ಕೊಡಬೇಕು ಎನ್ನತಕ್ಕ ಪ್ರಶ್ನೆ ಆಗುತ್ತದೆ. ಇದು ಬಹಳ ದೊಡ್ಡ ವಿಚಾರ. ನೀವು ಅದನ್ನು ಮಾಡುವುದಕ್ಕೆ ಹೋಗಿಬಿಟ್ಟರೆ ಇಲ್ಲಿ ಇಲ್ಲಿರುವ ಎಷ್ಟು ಹುಡುಗರಿಗೆ ತಾವು ಉದ್ಯೋಗವನ್ನು ಕೊಡುತ್ತೀರಿ?

Prof. M.D. NAJUNDASWAMY : Let us come to a reasonable arrangement. ನಾನು ಉದ್ಯೋಗ ಸೃಷ್ಟನಲ್ಲ. ನಮ್ಮ ವಿಳಂಬ ನೀತಿ ಎಷ್ಟಿದೆ. ಅದಕ್ಕೆ ಅನುಗುಣವಾಗಿ ವಯೋಮಿತಿಯನ್ನು ನಾವು ರಿಲ್ಯಾಕ್ಸ್ ಮಾಡಬೇಕಾಗುತ್ತದೆ. ಕನಿಷ್ಟ 40 ವರ್ಷ ಮಾಡಬೇಕಾಗುತ್ತದೆ. ರಿಟೈರ್‌ಮೆಂಟ್ ಏಜ್‌ವರೆಗೂ ಎಷ್ಟೋ ಜನಕ್ಕೆ ಕೆಲಸ ಸಿಗದೆ ರಿಟೈರ್ಡ್ ಆಗಿದ್ದಾರೆ. ಮೊದಲನೆಯ ಉದ್ಯೋಗ ಅವನಿಗೆ ಈ ದೇಶದಲ್ಲಿ ಇನ್ನೂ ಸಿಕ್ಕಿಲ್ಲ. ಆ ಕಾರಣ ಅವನಿಗೆ ವಯೋಮಿತಿ ನಾವು ಹಾಕುವುದಕ್ಕೆ ನಮಗೆ ನಿಜವಾದ ಹಕ್ಕಿಲ್ಲ.

ಶ್ರೀ ಎಸ್. ಬಂಗಾರಪ್ಪ : ಇದಕ್ಕೆಲ್ಲಾ ಒಂದೇ ಒಂದು ಉತ್ತರ ಕೊಟ್ಟರೆ ಬಹಳ ಒಳ್ಳೆಯದೆಂದು ನನ್ನ ಭಾವನೆ. ಒಬ್ಬ ಮನುಷ್ಯ ಹುಟ್ಟಿದ ಮೇಲೆ ಸರ್ಕಾರಿ ಉದ್ಯೋಗವೇ ಉದ್ಯೋಗ ಎಂದು ತಿಳಿದುಕೊಳ್ಳುವಷ್ಟು ಒಬ್ಬ ವ್ಯಕ್ತಿ ಹೋದರೆ ಅವನು ನಿಜವಾಗಿ ದೆಡ್ಡನಿರಬೇಕು ಎನ್ನತಕ್ಕ ಭಾವನೆಗೆ ಬರಬೇಕಾಗುತ್ತದೆ.

Prof M.D. NAJUNDASWAMY : I am talking about the individuals who are qualified for the Government jobs and not others.

ಶ್ರೀ ಎಸ್. ಬಂಗಾರಪ್ಪ : ಇಲ್ಲಿ ಹೈಸ್ಕೂಲ್‌ಗಳು ಕಾಲೇಜುಗಳು ಬೇಕಾದಷ್ಟು ಇವೆ. ಅಲ್ಲಿ ಅರ್ಜಿ ಹಾಕಿದವರಿಗೆಲ್ಲರಿಗೂ ಕೆಲಸವನ್ನು ಕೊಡುತ್ತಾ ಹೋದರೆ ನಾಳೆ ಸಂಬಳದ ಗತಿ ಏನು? ಟ್ಯಾಕ್ಸ್ ವಿಚಾರ ತಾವೆ ಹೇಳಿದ್ದೀರಿ. ನಾಳೆ ಟ್ಯಾಕ್ಸ್ ಕೆಪ್ಯಾಸಿಟಿ ನೋಡಬೇಕಲ್ಲ better you consider that aspect also. That is how. I feel.

ಅಧ್ಯಕ್ಷರು : ಇದು ಬಹಳ ಗಹನವಾದ ವಿಚಾರವಾಗಿದೆ. ಇದನ್ನು ಸಪರೇಟಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ : ಎಷ್ಟೋ ಜನ ನಿರುದ್ಯೋಗಿ ಯುವಕ ಯುವತಿಯವರು ನಂಜುಂಡಸ್ವಾಮಿಯವರ ವಯಸ್ಸಾಗುವವರೆಗೆ ಕೆಲಸಕ್ಕೆ ಕಾದು ಕುಳಿತಿರುವವರಿಗೆ ನಂಜುಂಡಸ್ವಾಮಿಯವರ ವಯಸ್ಸಿನ ಎಲಿಜಿಬಿಲಿಟಿ ಸಿಗುತ್ತದೆಯೇ?

ಅಧ್ಯಕ್ಷರು : ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಇತ್ತೀಚೆಗೆ ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿ ಬರತಕ್ಕ ಅಭ್ಯರ್ಥಿಗಳಿಗೆ ಶೇಕಡ 10ರಿಂದ 15ರವರೆಗೆ ಕೃಪಾಂಕವನ್ನು ಕೊಡತಕ್ಕ ಒಂದು ನೀತಿಯನ್ನು ಸ್ಪಷ್ಟಪಡಿಸಿದ್ದಾರೆ. ಕೇವಲ ಕೆಲವು ಇಲಾಖೆಗಳಿಗೆ ಇದು ಸಂಬಂಧಪಟ್ಟಿದ್ದುದು. ಕೆಎಸ್ಆರ್‌ಟಿಸಿಯಲ್ಲಿ ಮಾತ್ರ ಕೊಟ್ಟಿದ್ದಾರೆ. ಎಲ್ಲಾ ಇಲಾಖೆಗಳಲ್ಲಿಯೂ, ಎಲ್ಲಾ ಹುದ್ದೆಗಳಿಗೂ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ಅಭ್ಯರ್ಥಿಗಳಿಗೆ ನೀವು ಕೊಡುವ ನೀತಿಯನ್ನು ಅನುಸರಿಸುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮೊದಲು ನಾವು ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಹಾಗೆ ತೆಗೆದುಕೊಂಡಿದ್ದೇವೆ. ಶೇಕಡ 15 ಕೃಪಾಂಕಗಳನ್ನು ಗ್ರಾಮೀಣ ಪ್ರದೇಶದಿಂದ ಬರತಕ್ಕಂಥ ಮಕ್ಕಳಿಗೆ ಕೊಡಬೇಕೆಂದು ಮಾಡಿದ್ದೇವೆ. ಅರ್ಜೆಂಟಾಗಿ ಟೀಚರ್ಸ್ ಅನ್ನು ಭರ್ತಿ ಮಾಡಬೇಕಾಗಿದ್ದರಿಂದ ಈ ರೀತಿ ಮಾಡಿದ್ದೇವೆ. ಕೊನೆಯದಾಗಿ ಯಾವುದೇ ಇಲಾಖೆಯ ವಿಚಾರದ ಬಗ್ಗೆ ಬಂದರೂ ಕೂಡ 15 ಕೃಪಾಂಕಗಳನ್ನು ಗ್ರಾಮಾಂತರ ಪ್ರದೇಶದಿಂದ ಬರುವ ಅಭ್ಯರ್ಥಿಗಳಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಕಾರ್ಪೊರೇಟ್ ಬಾಡೀಸ್, ಬೋರ್ಡ್ಸ್, ಕಾರ್ಪೊರೇಷನ್ ಏನಿದೆ, ಅವುಗಳಿಗೆ ಅನ್ವಯಿಸತಕ್ಕಂಥ ವಿಚಾರದಲ್ಲಿ ಅವರಿಗೆ ಸರ್ಕಾರ ಸೂಕ್ತ ತಿಳುವಳಿಕೆ ಕೊಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸುಮಾರು 56,000ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ರಿಕ್ರೂಟ್‌ಮೆಂಟ್‌ಗೆ ಇದ್ದಂಥ ಬ್ಯಾನ್ ಅನ್ನು ತೆಗೆದುಹಾಕುವುದರ ಬಗ್ಗೆ ಏನಾದರೂ ಸರ್ಕಾರ ಯೋಚನೆ ಮಾಡಿದೆಯೇ? ಶಿಕ್ಷಣ ಇಲಾಖೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇವೆ. ಇದು ಅತ್ಯಂತ ಗಂಭೀರವಾದಂಥ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಈ ಪ್ರಶ್ನೆ ನೇರವಾಗಿ ಸಂಬಂಧಪಡದಿದ್ದರೂ ತಾವು ಪ್ರಸ್ತಾಪ ಮಾಡಿದಂಥ ವಿಚಾರದ ಬಗ್ಗೆ ನಾನು ಒಂದು ಅಭಿಪ್ರಾಯ ಕೊಡುತ್ತೇನೆ. ನಾವು ಕೆಲವಕ್ಕೆ ಮಾತ್ರ ಎಕಾನಮಿ ಆರ್ಡರ್ಸ್ ಅನ್ನು ರಿಲ್ಯಾಕ್ಸ್ ಮಾಡಿ ನೇಮಕಾತಿ ಕೊಟ್ಟಿದ್ದೇವೆ. ಕೆಲವು ರಿಕ್ರೂಟ್‌ಮೆಂಟ್‌ಗಳು ಪ್ರಾರಂಭವಾಗಿವೆ. ಇನ್ನು ಕೆಲವು ನಡೆಯುತ್ತಿವೆ. ಆದರೆ ಎಲ್ಲಾ ಹುದ್ದೆಗಳಲ್ಲಿ ಕೂಡ ರಿಕ್ರೂಟ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಸೂಚನೆ ಕೂಡ ಬಂದಿದೆ. ಆದಷ್ಟು ಮಟ್ಟಿಗೆ ಅನಾವಶ್ಯಕವಾದ ಹಣಕಾಸಿನ ಖರ್ಚು ಏನಿದೆ, ಅದನ್ನು ನಿಲ್ಲಿಸಬೇಕೆನ್ನುವ ದೃಷ್ಟಿಯಿಂದ ಈ ಎಕಾನಮಿ ಆರ್ಡರ್ಸ್, ಆಸ್ಟಿರಿಟಿ ಆರ್ಡರ್ಸ್, ಇತ್ಯಾದಿಗಳನ್ನೆಲ್ಲಾ ಫಾಲೋ ಮಾಡಬೇಕೆನ್ನುವ ವಿಚಾರವನ್ನು ಹೇಳಿದ್ದಾರೆ. ಅಷ್ಟಾದರೂ ಕೂಡ ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳ ಹುದ್ದೆಗಳು ಏನಿವೆ ಅವನ್ನು ಇಟ್ಟುಕೊಂಡು ಹೋಗಬೇಕಾಗಿದೆ. ಅದನ್ನು ಇಟ್ಟುಕೊಳ್ಳದೆ ಹೋದರೆ ಜನರಿಗೆ

ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಇಟ್ಟುಕೊಂಡು ಮೇಂಟೇನ್ ಮಾಡುತ್ತಿದ್ದೇವೆ.

ಅಕ್ರಮ ಸಂಪತ್ತಿನ ಬಗ್ಗೆ "ಬಿ" ವರದಿ

168- ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಂಪತ್ತು ಹಾಗೂ ವರಮಾನಕ್ಕಿಂತ ಹೆಚ್ಚು ಆದಾಯ ಹೊಂದಿದ್ದರೆನ್ನಲಾದ ಕೆಲವು ಅಧಿಕಾರಿಗಳ ಮೇಲೆ ಲೋಕಾಯುಕ್ತರವರು ಮೊಕದ್ದಮೆಯನ್ನು ದಾಖಲು ಮಾಡಿ, ತದನಂತರ ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು?

ಇ) ಈ ರೀತಿ ಎಷ್ಟು ಅಧಿಕಾರಿಗಳ ಬಗ್ಗೆ ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್‌ನ್ನು ಲೋಕಾಯುಕ್ತೆಶವರು ಸಲ್ಲಿಸಿರುತ್ತಾರೆ (ವಿವರವನ್ನು ನೀಡುವುದು)

ಈ) ಅಧಿಕಾರಿಗಳ ಮೇಲೆ ಮೊಕದ್ದಮೆ ದಾಖಲೆ ಮಾಡುವ ಮುನ್ನ ಎಲ್ಲಾ ಕಾನೂನು ಅಂಶಗಳನ್ನು ಲೋಕಾಯುಕ್ತ ಅಧಿಕಾರಿಗಳು ಗಣನೆಗೆ ತೆಗೆದುಕೊಂಡಿರುವರೇ?

ಉ) ಹಾಗಿದ್ದರೆ, 'ಬಿ' ರಿಪೋರ್ಟ್‌ನ್ನು ತದನಂತರ, ಸಲ್ಲಿಸಲು ಕಾರಣವೇನು?

ಊ) ಮೊಕದ್ದಮೆಯನ್ನು ಸರಿಯಾಗಿ ದಾಖಲಿಸದ ಲೋಕಾಯುಕ್ತ ಅಧಿಕಾರಿಗಳ ಮೇಲೆ ಸರ್ಕಾ ಕ್ರಮ ಕೈಗೊಳ್ಳಲಾಗುವುದೇ?

ಋ) ಈ ರೀತಿಯಿಂದ ರಾಜ್ಯದ ಆಡಳಿತದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಅಕ್ರಮ ಸಂಪತ್ತು ಹಾಗೂ ವರಮಾನಕ್ಕಿಂತ ಹೆಚ್ಚು ಆದಾಯ ಹೊಂದಿದ್ದರೆನ್ನಲಾದ ಅಧಿಕಾರಿಗಳ ವಿರುದ್ಧ ವಿವರವಾದ ತನಿಖೆ ಮಾಡಿ ತದನಂತರ ಸದರಿ ಆರೋಪವು ಸಾಬೀತಾಗಿಲ್ಲದ ಕಾರಣ ಪ್ರಕರಣವನ್ನು 'ಬಿ' ವರದಿಯನ್ನು ಸಲ್ಲಿಸಲಾಗಿದೆ.

ಇ) 30 ಜನರ ಬಗ್ಗೆ, ಆ ರೀತಿ ವರದಿ ಸಲ್ಲಿಸಲಾಗಿದೆ. ವಿವರ ಪಟ್ಟಿಯನ್ನು ಲಗತ್ತಿಸಿದೆ.

ಈ) ಹೌದು.

ಉ) 'ಆ' ಪ್ರಶ್ನೆಗೆ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಊ) ಇಲ್ಲ.

ಋ) ಇಲ್ಲ.